ಒಳಗಾಗಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಕ್ರಮ ಸಂಖ್ಯೆ (15) ರ ಕಾಮಗಾರಿಗೆ ರಾಷ್ಟ್ರೀಯ ಹೆದ್ದಾರಿ–48 ಕಿ.ಮೀ. 216.00 ಯಿಂದ 237.00 ಕಿ.ಮೀ ವರೆಗೆ ಬಲಪಡಿಸುವ ಕಾಮಗಾರಿಗೆ ಹಾಗೂ ಕಿ.ಮೀ. 250.62 ರಿಂದ 263.00 ಕಿ.ಮೀ. ವರೆಗೆ ಕಾಂಕ್ರೀಟ್ ರಸ್ತೆ ನಿರ್ಮಿಸುವ ಕಾಮಗಾರಿಗೆ ₹ 85.28 ಕೋಟಿ ಮೊತ್ತದಲ್ಲಿ ಇ.ಪಿ.ಸಿ. ಮಾದರಿಯಲ್ಲಿ ಕಾಮಗಾರಿ ನಿರ್ವಹಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕರಿಸುವ ಕೊನೆಗೆ ದಿನಾಂಕ:19.07.2014 ಆಗಿರುತ್ತದೆ. ಪ್ರಸ್ತಾವಿತ ಕಾಮಗಾರಿಗಳನ್ನು ಜೂನ್ 2015 ರ ಒಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ವಿದ್ಯುತ್ ಮೀಟರ್‌ನ ಬಾಕಿ ಮೊತ್ತವನ್ನು ಮನ್ನಾ ಮಾಡುವುದು

298(569); ಶ್ರೀ ಮುನ್ನಿರತ್ನ (ರಾಜರಾಜೇಶ್ವರಿ ನಗರ)

ಅ) ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಲಕ್ಷ್ಮೀದೇವಿನಗರ ವಾರ್ಡ್ ನಂ.42 ಮತ್ತು ಲಗ್ಗೆರೆ ವಾರ್ಡ್ ನಂ.69 ರಲ್ಲಿರುವ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ವತಿಯಿಂದ ಹುಡ್ಕೋ ಮತ್ತು ಪಾಂಬೇ ಯೋಜನೆಯಡಿಯಲ್ಲಿ ನಿರ್ಮಿಸಿರುವ ವಸತಿಗೃಹಗಳಲ್ಲಿ ಬೆಸ್ಕಾಂ ವತಿಯಿಂದ ಅಳವಡಿಸಿರುವ ಮೀಟರ್‌ಗಳ ಸಂಖ್ಯೆ ಎಷ್ಟು; ಮೀಟರ್ ಸಂಖ್ಯೆಗಳೊಂದಿಗೆ ವಿವರ ನೀಡುವುದು;

ಆ) ಈ ವಸತಿ ಸಮುಚ್ಚಯಗಳಲ್ಲಿ ವಾಸಿಸುತ್ತಿರುವವರು ವಿದ್ಯುತ್ ಶುಲ್ಕವನ್ನು ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪಾವತಿಸದೇ ಬಾಕಿ ಇರುವ ಮೊತ್ತವೆಷ್ಟು; ಈ ಬಗೆಗಿನ ವಿವರ ನೀಡುವುದು;

ಇ) ಈ ವಸತಿ ಸಮುಚ್ಚಯಗಳಲ್ಲಿ ವಾಸಿಸುತ್ತಿರುವ ಜನರು ಕಡು ಬಡವರಿದ್ದು, ವಿದ್ಯುತ್ ಬಾಕಿ ಮೊತ್ತವನ್ನು ಮನ್ನಾ ಮಾಡುವ

ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಕ್ರಮ ಕೈಗೊಂಡಿರುವ ಮಾಹಿತಿ ನೀಡುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ರಾಜರಾಜೇಶ್ವರಿ ನಗರ ವಿಧಾನ ಸಭೆ ಕ್ಷೇತ್ರ ವ್ಯಾಪ್ತಿಗೆ ಬರುವ ಲಕ್ಷ್ಮಿದೇವಿನಗರ ವಾರ್ಡ್ ಸಂಖ್ಯೆ 42 ರಲ್ಲಿ, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸಿರುವ ಒಟ್ಟು 1010 ವಸತಿ ಗೃಹಗಳಿಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ವಿದ್ಯುತ್ ಸಂಪರ್ಕ ನೀಡಿ, ಮಾಪಕಗಳನ್ನು ಅಳವಡಿಸಿರುತ್ತದೆ. ಅವುಗಳ ಆರ್.ಆರ್. ಸಂಖ್ಯೆ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಲಗ್ಗೆರೆ ವಾರ್ಡ್ ಸಂಖ್ಯೆ 69 ರಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಹುಡ್ಕೊ/ವಾಂಬೆ ಯೋಜನೆ ನಿರ್ಮಿತ ವಸತಿ ಗೃಹಗಳು ಇರುವುದಿಲ್ಲ.

ಆ) ಹೌದು.

ಈ ವಸತಿ ಸಮುಚ್ಚಯಗಳಲ್ಲಿ ವಾಸಿಸುತ್ತಿರುವವರ ವಿದ್ಯುತ್ ಶುಲ್ಕದ ಬಾಕಿ ₹ 7.61 ಕೋಟಿಗಳಾಗಿರುತ್ತದೆ. ಈ ಬಾಕಿ ಮೊತ್ತವನ್ನು ಬೆಸ್ಕಾಂ ಸಂಸ್ಥೆಗೆ ಪಾವತಿಸುವಂತೆ ಕ್ರಮ ಕೈಗೊಳ್ಳುವಂತೆ ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ ಇವರ ಗಮನಕ್ಕೆ ತರಲಾಗಿದೆ.

ಇ) ಈ ವಸತಿ ಸಮುಚ್ಚಯಗಳಲ್ಲಿ ವಾಸಿಸುತ್ತಿರುವವರ ಬಾಕಿ ವಿದ್ಯುತ್ ಶುಲ್ಕ ಮನ್ನಾ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನಾ ಹಂತದಲ್ಲಿದೆ.